# ಕರ್ನಾಟಕ ಸರ್ಕಾರ

ಸಂಖ್ಯೆ:ಇಡಿ 78 ಟಿಇಸಿ 2011 (ಭಾಗ)

ಕರ್ನಾಟಕ ಸರ್ಕಾರದ ಸಚಿವಾಲಯ,
ಸಚಿವಾಲಯ-2, ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:03-05-2011

## ಸುತ್ತೋಲೆ

ರಾಜ್ಯದಲ್ಲಿನ ಅನುದಾನಿತವಲ್ಲದ ಖಾಸಗಿ ಶಿಕ್ಷಣ ಸಂಸ್ಥೆಗಳು ಮತ್ತು ಸರ್ಕಾರದ ನಡುವೆ 2011-12ನೇ ಶೈಕ್ಷಣಿಕ ವರ್ಷಕ್ಕಾಗಿ ಸಮ್ಮತಾಭಿಪ್ರಾಯದ ವ್ಯವಸ್ಥೆ ಅಥವಾ ಒಪ್ಪಂದ ಮಾಡಿಕೊಳ್ಳಲು ಉದ್ದೇಶಿಸಿ ಕರ್ನಾಟಕ ವೃತ್ತಿಪರ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) ಅಧಿನಿಯಮ 2006 ನ್ನು (2006ರ ಕರ್ನಾಟಕ ಅಧಿನಿಯಮ 8ನ್ನು) ತಡೆಹಿಡಿಯುವ ಉದ್ದೇಶದಿಂದ ಕರ್ನಾಟಕ ವೃತ್ತಿಪರ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) 2011 (ಕರ್ನಾಟಕ ಅಧಿನಿಯಮ ಸಂಖ್ಯೆ 23) ನ್ನು ಜಾರಿಗೊಳಿಸಲಾಗಿತ್ತು. ಇದರನ್ವಯ ರಾಜ್ಯ ಸರ್ಕಾರವು ಕರ್ನಾಟಕ ನಿವಾಸಿ ವಿದ್ಯಾರ್ಥಿಗಳ ಮತ್ತು ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ವರ್ಗಗಳ ಹಿತರಕ್ಷಣೆಗಾಗಿ ಖಾಸಗಿ ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ (ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ಸಹಿತ) ಪ್ರವೇಶಗಳು ಮತ್ತು ಶುಲ್ಕ ನಿಗದಿಯನ್ನು ಹಿಂದಿನ ಹಲವು ಸಾಲುಗಳಲ್ಲಿ ಸಮ್ಮತಾಭಿಪ್ರಾಯ ವ್ಯವಸ್ಥೆ ಅಥವಾ ಒಪ್ಪಂದ ವ್ಯವಸ್ಥೆಯ ಮುಖಾಂತರ ಯಶಸ್ವಿಯಾಗಿ ನಿರ್ವಹಿಸಿರುವಂತೆ ಈ ಬಾರಿಯೂ ಶುಲ್ಕದ ದರವನ್ನು ನಿಗದಿಗೊಳಿಸಲು ಕರ್ನಾಟಕ ಅನುದಾನರಹಿತ ಖಾಸಗಿ ವೃತ್ತಿಶಿಕ್ಷಣ ಇಂಜಿನಿಯರಿಂಗ್ ಕಾಲೇಜುಗಳ ಸಂಘ (Karnataka Un-aided Professional Engineering Colleges Association), ಕಾಮೆಡ್-ಕೆ ಹಾಗೂ ಕರ್ನಾಟಕ ಮತಿಯ ಮತ್ತು ಭಾಷಾ ಅಲ್ಪಸಂಖ್ಯಾತ ವೃತ್ತಿಶಿಕ್ಷಣ ಕಾಲೇಜುಗಳ ಸಂಘ (Karnataka Religious & Linguistic. Minority Professional College Association) ಗಳನ್ನು ಹಲವು ಬಾರಿ ಮಾತುಕತೆಗೆ ಆಹ್ವಾನಿಸಲಾಗಿತ್ತು. ಆದರೆ ಕೆಲವು ಶಿಕ್ಷಣ ಸಂಸ್ಥೆಗಳು ಹಾಗೂ ಸಂಘವು ಸರ್ಕಾರವು ಅಂತಿಮವಾಗಿ ಸೂಚಿಸಿರುವ ಶುಲ್ಕಕ್ಕೆ ಒಪ್ಪಿರುವುದಿಲ್ಲ ಮತ್ತು ಹಲವು ಕಾಲೇಜುಗಳು ಸರ್ಕಾರದ ಈ ಪ್ರಸ್ತಾವನೆಗೆ ಮೌಖಿಕವಾಗಿ ಒಪ್ಪಿಗೆಯನ್ನು ಸೂಚಿಸಿರುತ್ತವೆ. ಈ ಹಿನ್ನೆಲೆಯಲ್ಲಿ ಕೆಳಕಂಡಂತೆ ಸೀಟು ಹಂಚಿಕೆ ಮತ್ತು ಶುಲ್ಕ ನಿಗದಿಯನ್ನು ಸರ್ಕಾರವು ಪ್ರಸ್ತಾಪಿಸಿದೆ.

### ಅನುದಾನಿತವಲ್ಲದ ಖಾಸಗಿ ಶಿಕ್ಷಣ ಸಂಸ್ಥೆಗಳು (ಅಲ್ಪಸಂಖ್ಯಾತವಲ್ಲದ)

| | ಇಂಜಿನಿಯರಿಂಗ್ / ಟೆಕ್ನಾಲಜಿ/ಆರ್ಕಿಟೆಕ್ಚರ್ (ಸ್ನಾತಕ ಪದವಿ ಪ್ರವೇಶಾತಿಗೆ) | | | | | ಎಐಸಿಟಿಇ ಯ ಬೋಧನಾ ಶುಲ್ಕ ಮನ್ನಾ ಯೋಜನೆಯಡಿ (tuition fee waiver scheme) ಅಭ್ಯರ್ಥಿಗಳ ಆಯ್ಕೆಯನ್ನು ಕೆ.ಇ.ಎ ಮೂಲಕ ಮಾಡಲಾಗುವುದು |
|---|---|---|---|---|---|---|
| | ಸರ್ಕಾರಿ ಕೋಟಾ | | ಆಡಳಿತ ಮಂಡಳಿ ಕೋಟಾ | | | |
| ಸೀಟು ಹಂಚಿಕೆ ಶೇಕಡವಾರು | 45% (ರೂ.32,500) | | 30% | 25% | | 5% |
| | ಶೇ.22.5% | ಶೇ.22.5% | | 15% | 10% | ಪ್ರತಿಭಾನ್ವಿತ ಬಡ ವಿದ್ಯಾರ್ಥಿಗಳು ವಾರ್ಷಿಕ ಆದಾಯ ರೂ.2.00 ಲಕ್ಷ ಮಿತಿಯೊಳಗಿರುವ ವಿದ್ಯಾರ್ಥಿಗಳಿಗೆ ಎಐಸಿಟಿಇ ನಿಗದಿಪಡಿಸುವ ಪ್ರವೇಶ ಮಿತಿಯ ಮೇಲೆ ಶೇಕಡ 5 ರಷ್ಟು ಹೆಚ್ಚುವರಿ ಸೀಟುಗಳು (supernumerary seats) ಯಾವುದೇ ಶುಲ್ಕವಿಲ್ಲದೆ. |
| ಶುಲ್ಕ ರೂ.ಗಳಲ್ಲಿ (ಪ್ರತಿ ವರ್ಷಕ್ಕೆ) | ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ | ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಗೆ | ಆಡಳಿತ ಮಂಡಳಿಯು ನಡೆಸುವ ಸ್ಪರ್ಧಾ ಪರೀಕ್ಷೆಯಲ್ಲಿ ಆಯ್ಕೆಗೊಂಡ ವಿದ್ಯಾರ್ಥಿಗಳಿಗೆ ಗರಿಷ್ಠ ರೂ. 1,25,000 ಗಳ ಮಿತಿಗೊಳಪಟ್ಟು | ಅನಿವಾಸಿ ಭಾರತೀಯ ವಿದ್ಯಾರ್ಥಿಗಳಿಗೆ | ಆಡಳಿತ ಮಂಡಳಿಯ ವಿವೇಚನಾ / ಆದ್ಯತೆಯ ಕೋಟಾ | |

## ಅನುದಾನಿತವಲ್ಲದ ಖಾಸಗಿ ಶಿಕ್ಷಣ ಸಂಸ್ಥೆಗಳು (ಅಲ್ಪಸಂಖ್ಯಾತ)

| | | | | | | |
|---|---|---|---|---|---|---|
| | ಇಂಜಿನಿಯರಿಂಗ್ / ಟೆಕ್ನಾಲಜಿ/ಆರ್ಕಿಟೆಕ್ಚರ್ (ಸ್ನಾತಕ ಪದವಿ ಪ್ರವೇಶಾತಿಗೆ) | | | | | ಎಐಸಿಟಿಇ ಯ ಬೋಧನಾ ಶುಲ್ಕ ಮನ್ನಾ ಯೋಜನೆಯಡಿ (tuition fee waiver scheme) ಅಭ್ಯರ್ಥಿಗಳ ಆಯ್ಕೆಯನ್ನು ಕೆ.ಇ.ಎ ಮೂಲಕ ಮಾಡಲಾಗುವುದು |
| | ಸರ್ಕಾರಿ ಕೋಟಾ | | ಆಡಳಿತ ಮಂಡಳಿ ಕೋಟಾ | | | |
| ಸೀಟು ಹಂಚಿಕೆ ಶೇಕಡವಾರು | 40% (ರೂ.32,500) | | 35% | 25% | | 5% |
| | ಶೇ.20% | ಶೇ.20% | | 15% | 10% | |
| ಶುಲ್ಕ ರೂ.ಗಳಲ್ಲಿ (ಪ್ರತಿ ವರ್ಷಕ್ಕೆ) | ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ | ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಗೆ | ಆಡಳಿತ ಮಂಡಳಿಯು ನಡೆಸುವ ಸ್ಪರ್ಧಾ ಪರೀಕ್ಷೆಯಲ್ಲಿ ಆಯ್ಕೆಗೊಂಡ ವಿದ್ಯಾರ್ಥಿಗಳಿಗೆ ಗರಿಷ್ಠ ರೂ. 1,25,000 ಗಳ ಮಿತಿಗೊಳಪಟ್ಟು | ಅನಿವಾಸಿ ಭಾರತೀಯ ವಿದ್ಯಾರ್ಥಿಗಳಿಗೆ | ಆಡಳಿತ ಮಂಡಳಿಯ ವಿವೇಚನಾ / ಆದ್ಯತೆಯ ಕೋಟಾ | ಪ್ರತಿಭಾನ್ವಿತ ಬಡ ವಿದ್ಯಾರ್ಥಿಗಳು ವಾರ್ಷಿಕ ಆದಾಯ ರೂ.2.00 ಲಕ್ಷ ಮಿತಿಯೊಳಗಿರುವ ವಿದ್ಯಾರ್ಥಿಗಳಿಗೆ ಎಐಸಿಟಿಇ ನಿಗದಿಪಡಿಸುವ ಪ್ರವೇಶ ಮಿತಿಯ ಮೇಲೆ ಶೇಕಡ 5 ರಷ್ಟು ಹೆಚ್ಚುವರಿ ಸೀಟುಗಳು (supernumerary seats) ಯಾವುದೇ ಶುಲ್ಕವಿಲ್ಲದೆ. |

ಮೇಲ್ಕಂಡ ಸೀಟು ಹಂಚಿಕೆ ಹಾಗೂ ಶುಲ್ಕ ನಿಗದಿಗೆ ಒಪ್ಪುವ ವೈಯಕ್ತಿಕ ಶಿಕ್ಷಣ ಸಂಸ್ಥೆ ಅಥವಾ ಸಂಘದವರು ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ಸಮ್ಮತಾಭಿಪ್ರಾಯ ವ್ಯವಸ್ಥೆ ಅಥವಾ ಒಪ್ಪಂದ ವ್ಯವಸ್ಥೆಗೆ ತಮ್ಮ ಒಪ್ಪಿಗೆಯನ್ನು 15 ದಿನಗಳ ಒಳಗಾಗಿ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), 6ನೇ ಮಹಡಿ, ಗೇಟ್ ನಂ.2, ಬಹುಮಹಡಿ ಕಟ್ಟಡ, ಅಂಬೇಡ್ಕರ್ ವೀದಿ, ಬೆಂಗಳೂರು-560001 ಇವರಿಗೆ ಕಳುಹಿಸುವಂತೆ ಕೋರಲಾಗಿದೆ. ಈ ಶುಲ್ಕ ಮತ್ತು ಸೀಟು ಹಂಚಿಕೆಗೆ ಒಪ್ಪದ ಶಿಕ್ಷಣ ಸಂಸ್ಥೆಗಳು ಕರ್ನಾಟಕ ವೃತ್ತಿಪರ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) ಅಧಿನಿಯಮ 2006 ರನ್ವಯ ನ್ಯಾಯಮೂರ್ತಿ ಶ್ರೀ ಬಿ.ಪದ್ಮರಾಜ್ ಶುಲ್ಕ ನಿರ್ಧರಣಾ ಸಮಿತಿಯು ನಿಗದಿಗೊಳಿಸಿಗುವ ಶುಲ್ಕವನ್ನು ಮಾತ್ರ ಪಡೆದು ಸೀಟುಗಳನ್ನು ಕರ್ನಾಟಕ ವೃತ್ತಿಪರ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) ಅಧಿನಿಯಮ 2006 ರನ್ವಯವೇ ಭರ್ತಿ ಮಾಡಬೇಕಾಗುತ್ತದೆ.

(ಎಂ.ಮದನ್ ಗೋಪಾಲ್)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ).

ಗೆ:

1. ಅಧ್ಯಕ್ಷರು, ಕರ್ನಾಟಕ ಅನುದಾನರಹಿತ ಖಾಸಗಿ ವೃತ್ತಿಶಿಕ್ಷಣ ಇಂಜಿನಿಯರಿಂಗ್ ಕಾಲೇಜುಗಳ ಸಂಘ, ಆರ್.ವಿ ಟ್ರಸ್ಟ್, ಆರ್.ವಿ. ಟೀಚರ್ಸ್ ಕಾಲೇಜ್, ಅಶೋಕ ಪಿಲ್ಲರ್ ಹತ್ತಿರ, ಬೆಂಗಳೂರು.

## 2011-12ನೇ ಶೈಕ್ಷಣಿಕ ವರ್ಷಕ್ಕೆ ಪ್ರವೇಶ ಪಡೆಯುವ ಬ್ಯಾಚ್‌ನ ವಿದ್ಯಾರ್ಥಿಗಳಿಗೆ ಅನ್ವಯಿಸುವಂತೆ ಸೀಟುಗಳ ಹಂಚಿಕೆ ಮತ್ತು ಶುಲ್ಕ ನಿಗದಿಯ ಬಗ್ಗೆ

## ಸಮ್ಮತಾಭಿಪ್ರಾಯ ವ್ಯವಸ್ಥೆ ಅಥವಾ ಒಪ್ಪಂದಕ್ಕೆ ಒಪ್ಪಿಗೆ ಪತ್ರ

## (ಅಲ್ಪಸಂಖ್ಯಾತವಲ್ಲದ ಖಾಸಗಿ ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆ / ಸಂಸ್ಥೆಗಳಿಗೆ)

2006-07ನೇ ಶೈಕ್ಷಣಿಕ ಸಾಲಿನಿಂದ ಕರ್ನಾಟಕ ರಾಜ್ಯ ಸರ್ಕಾರದೊಂದಿಗೆ ಸಮ್ಮತಾಭಿಪ್ರಾಯದ ವ್ಯವಸ್ಥೆ ಅಥವಾ ಒಪ್ಪಂದ ವ್ಯವಸ್ಥೆಯ ಮುಖಾಂತರ ಶುಲ್ಕ ನಿಗದಿ ಮತ್ತು ಸೀಟು ಹಂಚಿಕೆ ಯನ್ನು ನಿರ್ಧರಿಸಿರುವಂತೆಯೇ ಹಾಗೂ ಕರ್ನಾಟಕ ನಿವಾಸಿ ವಿದ್ಯಾರ್ಥಿಗಳ ಮತ್ತು ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ವರ್ಗಗಳ ಹಿತರಕ್ಷಣೆಗಾಗಿ ಸರ್ಕಾರವು 2011-12ನೇ ಶೈಕ್ಷಣಿಕ ಸಾಲಿನ ಬ್ಯಾಚ್‌ಗೆ. ನಿಗದಿಪಡಿಸಲಾಗುವ ಶುಲ್ಕ ಹಾಗೂ ಸೀಟು ಹಂಚಿಕೆಯ ಬಗ್ಗೆ ಸಮ್ಮತಾಭಿಪ್ರಾಯ ವ್ಯವಸ್ಥೆ ಅಥವಾ ಒಪ್ಪಂದ ಮಾಡಿಕೊಳ್ಳಲು ನನಗೆ / ನಮಗೆ ಅಧಿಕಾರವನ್ನು ನೀಡಲಾಗಿದೆ. ಅದರಂತೆಯೇ ಕರ್ನಾಟಕ ವೃತ್ತಿಪರ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) 2011 (2011 ರ ಕರ್ನಾಟಕ ಅಧಿನಿಯಮ ಸಂಖ್ಯೆ 23) ರನ್ವಯ ಈ ಕೆಳಕಂಡ ಸೀಟು ಹಂಚಿಕೆ ಮತ್ತು ಶುಲ್ಕ ನಿಗದಿಗೆ ಪೂರ್ಣವಾಗಿ ಒಪ್ಪಿದ್ದು ಅದರನ್ವಯ ಸೀಟ್‌ಮ್ಯಾಟ್ರಿಕ್ಸ್‌ನ್ನು ಹೊರಡಿಸಲು ಕೋರುತ್ತೇನೆ / ವೆ.

| | ಇಂಜಿನಿಯರಿಂಗ್ / ಟೆಕ್ನಾಲಜಿ/ಆರ್ಕಿಟೆಕ್ಚರ್ (ಸ್ನಾತಕ ಪದವಿ ಪ್ರವೇಶಾತಿಗೆ) | | | | | ಎಐಸಿಟಿಇ ಯ ಬೋಧನಾ ಶುಲ್ಕ ಮನ್ನಾ ಯೋಜನೆಯಡಿ (tuition fee waiver scheme) |
|---|---|---|---|---|---|---|
| | ಸರ್ಕಾರಿ ಕೋಟಾ | | ಆಡಳಿತ ಮಂಡಳಿ ಕೋಟಾ | | | |
| ಸೀಟು ಹಂಚಿಕೆ ಶೇಕಡವಾರು | 45% (ರೂ.32,500) | | 30% | 25% | | 5% |
| | ಶೇ.22.5% | ಶೇ.22.5% | | 15% | 10% | |
| ಶುಲ್ಕ ರೂ.ಗಳಲ್ಲಿ (ಪ್ರತಿ ವರ್ಷಕ್ಕೆ) | ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ | ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಗೆ | ಆಡಳಿತ ಮಂಡಳಿಯು ನಡೆಸುವ ಸ್ಪರ್ಧಾ ಪರೀಕ್ಷೆಯಲ್ಲಿ ಆಯ್ಕೆಗೊಂಡ ವಿದ್ಯಾರ್ಥಿಗಳಿಗೆ ಗರಿಷ್ಠ ರೂ. 1,25,000 ಗಳ ಮಿತಿಗೊಳಪಟ್ಟು | ಅನಿವಾಸಿ ಭಾರತೀಯ ವಿದ್ಯಾರ್ಥಿಗಳಿಗೆ | ಆಡಳಿತ ಮಂಡಳಿಯ ವಿವೇಚನಾ / ಆದ್ಯತೆಯ ಕೋಟಾ | ಪ್ರತಿಭಾನ್ವಿತ ಬಡ ವಿದ್ಯಾರ್ಥಿಗಳು ವಾರ್ಷಿಕ ಆದಾಯ ರೂ.2.00 ಲಕ್ಷ ಮಿತಿಯೊಳಗಿರುವ ವಿದ್ಯಾರ್ಥಿಗಳಿಗೆ ಎಐಸಿಟಿಇ ನಿಗದಿಪಡಿಸುವ ಪ್ರವೇಶ ಮಿತಿಯ ಮೇಲೆ ಶೇಕಡ 5 ರಷ್ಟು ಹೆಚ್ಚುವರಿ ಸೀಟುಗಳು (supernumerary seats) ಯಾವುದೇ ಶುಲ್ಕವಿಲ್ಲದೆ ಅಭ್ಯರ್ಥಿಗಳ ಆಯ್ಕೆಯನ್ನು ಕೆ.ಇ.ಎ ಮೂಲಕ ಮಾಡಲಾಗುವುದು |

ಸಹಿ..............

ಹೆಸರು...............

ಪದನಾಮ.........

ಸ್ಥಳ

ದಿನಾಂಕ:

ಶಿಕ್ಷಣ ಸಂಸ್ಥೆಯ/ಸಂಘದ ಹೆಸರು (ಮೊಹರಿನೊಂದಿಗೆ)

## 2011-12ನೇ ಶೈಕ್ಷಣಿಕ ವರ್ಷಕ್ಕೆ ಪ್ರವೇಶ ಪಡೆಯುವ ಬ್ಯಾಚ್‌ನ ವಿದ್ಯಾರ್ಥಿಗಳಿಗೆ ಅನ್ವಯಿಸುವಂತೆ ಸೀಟುಗಳ ಹಂಚಿಕೆ ಮತ್ತು ಶುಲ್ಕ ನಿಗದಿಯ ಬಗ್ಗೆ

### ಸಮ್ಮತಾಭಿಪ್ರಾಯ ವ್ಯವಸ್ಥೆಯ ಒಪ್ಪಂದಕ್ಕೆ ಒಪ್ಪಿಗೆ ಪತ್ರ

### (ಅಲ್ಪಸಂಖ್ಯಾತ ಖಾಸಗಿ ವೃತ್ತಿ ಶಿಕ್ಷಣ ಸಂಘ / ಸಂಸ್ಥೆಗಳಿಗೆ).

2006-07ನೇ ಶೈಕ್ಷಣಿಕ ಸಾಲಿನಿಂದ ಕರ್ನಾಟಕ ರಾಜ್ಯ ಸರ್ಕಾರದೊಂದಿಗೆ ಸಮ್ಮತಾಭಿಪ್ರಾಯದ ವ್ಯವಸ್ಥೆ ಅಥವಾ ಒಪ್ಪಂದ ವ್ಯವಸ್ಥೆಯ ಮುಖಾಂತರ ಶುಲ್ಕ ನಿಗದಿ ಮತ್ತು ಸೀಟು ಹಂಚಿಕೆಯನ್ನು ನಿರ್ಧರಿಸಿರುವಂತೆಯೇ ಹಾಗೂ ಕರ್ನಾಟಕ ನಿವಾಸಿ ವಿದ್ಯಾರ್ಥಿಗಳ ಮತ್ತು ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ವರ್ಗಗಳ ಹಿತರಕ್ಷಣೆಗಾಗಿ ಸರ್ಕಾರವು 2011-12ನೇ ಶೈಕ್ಷಣಿಕ ಸಾಲಿನ ಬ್ಯಾಚ್‌ಗೆ ನಿಗದಿಪಡಿಸಲಾಗುವ ಶುಲ್ಕ ಹಾಗೂ ಸೀಟು ಹಂಚಿಕೆಯ ಬಗ್ಗೆ ಸಮ್ಮತಾಭಿಪ್ರಾಯ ವ್ಯವಸ್ಥೆ ಅಥವಾ ಒಪ್ಪಂದ ಮಾಡಿಕೊಳ್ಳಲು ನನಗೆ / ನಮಗೆ ಅಧಿಕಾರವನ್ನು ನೀಡಲಾಗಿದೆ. ಅದರಂತೆಯೇ ಕರ್ನಾಟಕ ವೃತ್ತಿಪರ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) 2011 (2011 ರ ಕರ್ನಾಟಕ ಅಧಿನಿಯಮ ಸಂಖ್ಯೆ 23) ರನ್ವಯ ಈ ಕೆಳಕಂಡ ಸೀಟು ಹಂಚಿಕೆ ಮತ್ತು ಶುಲ್ಕ ನಿಗದಿಗೆ ಪೂರ್ಣವಾಗಿ ಒಪ್ಪಿದ್ದು ಅದರನ್ವಯ ಸೀಟ್‌ಮ್ಯಾಟ್ರಿಕ್ಸ್‌ನ್ನು ಹೊರಡಿಸಲು ಕೋರುತ್ತೇನೆ / ವೆ.

| | ಇಂಜಿನಿಯರಿಂಗ್ / ಟೆಕ್ನಾಲಜಿ/ಆರ್ಕಿಟೆಕ್ಚರ್ (ಸ್ನಾತಕ ಪದವಿ ಪ್ರವೇಶಾತಿಗೆ) | | | | | ಎಐಸಿಟಿಇ ಯ ಬೋಧನಾ ಶುಲ್ಕ ಮನ್ನಾ ಯೋಜನೆಯಡಿ (tuition fee waiver scheme) |
|---|---|---|---|---|---|---|
| | ಸರ್ಕಾರಿ ಕೋಟಾ | | ಆಡಳಿತ ಮಂಡಳಿ ಕೋಟಾ | | | |
| ಸೀಟು ಹಂಚಿಕೆ ಶೇಕಡವಾರು | 40% (ರೂ.32,500) | | 35% | 25% | | 5% |
| | ಶೇ.20% | ಶೇ.20% | | 15% | 10% | |
| ಶುಲ್ಕ ರೂ.ಗಳಲ್ಲಿ (ಪ್ರತಿ ವರ್ಷಕ್ಕೆ) | ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ | ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಗೆ | ಆಡಳಿತ ಮಂಡಳಿಯು ನಡೆಸುವ ಸ್ಪರ್ಧಾ ಪರೀಕ್ಷೆಯಲ್ಲಿ ಆಯ್ಕೆಗೊಂಡ ವಿದ್ಯಾರ್ಥಿಗಳಿಗೆ ಗರಿಷ್ಠ ರೂ. 1,25,000 ಗಳ ಮಿತಿಗೊಳಪಟ್ಟು | ಅನಿವಾಸಿ ಭಾರತೀಯ ವಿದ್ಯಾರ್ಥಿಗಳಿಗೆ | ಆಡಳಿತ ಮಂಡಳಿಯ ವಿವೇಚನಾ / ಆದ್ಯತೆಯ ಕೋಟಾ | ಪ್ರತಿಭಾನ್ವಿತ ಬಡ ವಿದ್ಯಾರ್ಥಿಗಳು ವಾರ್ಷಿಕ ಆದಾಯ ರೂ.2.00 ಲಕ್ಷ ಮಿತಿಯೊಳಗಿರುವ ವಿದ್ಯಾರ್ಥಿಗಳಿಗೆ ಎಐಸಿಟಿಇ ನಿಗದಿಪಡಿಸುವ ಪ್ರವೇಶ ಮಿತಿಯ ಮೇಲೆ ಶೇಕಡ 5 ರಷ್ಟು ಹೆಚ್ಚುವರಿ ಸೀಟುಗಳು (supernumerary seats) ಯಾವುದೇ ಶುಲ್ಕವಿಲ್ಲದೆ ಅಭ್ಯರ್ಥಿಗಳ ಆಯ್ಕೆಯನ್ನು ಕೆ.ಇ.ಎ ಮೂಲಕ ಮಾಡಲಾಗುವುದು |

ಸಹಿ..............

ಹೆಸರು...............

ಪದನಾಮ..........

ಶಿಕ್ಷಣ ಸಂಸ್ಥೆಯ/ಸಂಘದ ಹೆಸರು(ಮೊಹರಿನೊಂದಿಗೆ)

ಸ್ಥಳ

ದಿನಾಂಕ:

2. ಅಧ್ಯಕ್ಷರು, ಕರ್ನಾಟಕ ರಾಜ್ಯ ಮತೀಯ ಅಲ್ಪಸಂಖ್ಯಾತ ವೃತ್ತಿಪರ ಶಿಕ್ಷಣ ಸಂಸ್ಥೆಗಳ ಸಂಘ, ನಂ.143, ಸೂರ್ಯಮುಖಿ ಅಪಾರ್ಟ್‌ಮೆಂಟ್ಸ್, 4ನೇ ಮಹಡಿ, ವಿಟ್ಟಲ್ ಮಲ್ಯ ರಸ್ತೆ, ಬೆಂಗಳೂರು.
3. ಅಧ್ಯಕ್ಷರು, The Forum of Un-aided Private Engineering Colleges, No.259/B, Bommasandra Industrial Area, Hosur Road, Bangalore-560009.
4. ಅಧ್ಯಕ್ಷರು, ಕಾಮೆಡ್-ಕೆ, ನಂ.132, 2ನೇ ಮಹಡಿ, 17ನೇ ಕ್ರಾಸ್, 11ನೇ ಮೈನ್, ಮಲ್ಲೇಶ್ವರ, ಬೆಂಗಳೂರು-560055
5. ಎಲ್ಲಾ ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರುಗಳಿಗೆ
6. ಕುಲಸಚಿವರು, ವಿಶ್ವೇಶ್ವರಾಯ ತಾಂತ್ರಿಕ ವಿಶ್ವವಿದ್ಯಾಲಯ, ಜ್ಞಾನ ಸಂಗಮ, ಮಚ್ಚೆ, ಬೆಳಗಾವಿ (ಈ ಸುತ್ತೋಲೆಯನ್ನು ತಮ್ಮ ಅಂತರ್ ಜಾಲದಲ್ಲಿ ಪ್ರಚುರಪಡಿಸುವುದು)
7. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು (ಈ ಸುತ್ತೋಲೆಯನ್ನು ತಮ್ಮ ಅಂತರ್ ಜಾಲದಲ್ಲಿ ಪ್ರಚುರಪಡಿಸುವುದು)
8. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರ ಬೆಂಗಳೂರು (ಈ ಸುತ್ತೋಲೆಯನ್ನು ತಮ್ಮ ಅಂತರ್ ಜಾಲದಲ್ಲಿ ಪ್ರಚುರಪಡಿಸುವುದು)
9. ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ
10. ಮಾನ್ಯ ಉನ್ನತ ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ, ಐಟಿ/ಬಿಟಿ ಮತ್ತು ಮುಜರಾಯಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
11. ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, 4ನೇ ಮಹಡಿ, ವಿಕಾಸ ಸೌಧ, ಬೆಂಗಳೂರು
12. ಸರ್ಕಾರದ ಪ್ರಧಾನ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ, ವಿಧಾನ ಸೌಧ, ಬೆಂಗಳೂರು
13. ಮಾಹಿತಿ ಕೇಂದ್ರ, ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು (ಈ ಸುತ್ತೋಲೆಯನ್ನು ತಮ್ಮ ಅಂತರ್ ಜಾಲದಲ್ಲಿ ಪ್ರಚುರಪಡಿಸುವುದು)
14. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ